# ಪ್ರೀತಿ ಇಲ್ಲದ ಮೇಲೆ ಜೀವನ ನಡೆಯುವುದು ಹೇಗೆ?

## 'ಕುವೆಂಪು ರಾಷ್ಟ್ರೀಯ ಪುರಸ್ಕಾರ' ಪುರಸ್ಕೃತ ಶೀರ್ಷೇಂದು ಮುಖೋಪಾಧ್ಯಾಯ ಸಂದರ್ಶನ



**ನಾಗ ಎಚ್. ಹುಬ್ಳಿ**

ಬಂಗಾಳಿ ಸಾಹಿತ್ಯ ಕ್ಷೇತ್ರದಲ್ಲಿ ಶೀರ್ಷೇಂದು ಮುಖೋಪಾಧ್ಯಾಯರ ಹೆಸರು ಮನೆಮಾತು. ಬಾಂಗ್ಲಾದಲ್ಲಿರುವ ಮಯಮನ್‌ಸಿಂಗ್‌ನಲ್ಲಿ 1935ರ ನವೆಂಬರ್ 2ರಂದು ಜನಿಸಿದ ಶೀರ್ಷೇಂದು, ಮೂಲತಃ ಢಾಕಾದ ವಿಕ್ರಮಪುರ(ಈಗಿನ ಮುನ್ಷಿಗಂಜ್)ದವರು. ಇವರ ತಂದೆ ರೈಲ್ವೆಯಲ್ಲಿ ಉದ್ಯೋಗಿಯಾಗಿದ್ದರು. ಎರಡನೇ ಮಹಾಯುದ್ಧದ ಸಮಯದಲ್ಲಿ ಕಲ್ಕತ್ತಾ, ನಂತರದಲ್ಲಿ ಬಿಹಾರ, ಉತ್ತರ ಬಂಗಾಳ, ಪೂರ್ವ ಬಂಗಾಳ, ಅಸ್ಸಾಮ್, ಕುಚ್‌ಬಿಹಾರ ಮುಂತಾದ ಸ್ಥಳಗಳಲ್ಲಿ ಬಾಲ್ಯವನ್ನು ಹಾಗೂ ತಾರುಣ್ಯವನ್ನು ಕಳೆದದ್ದು ಇವರ ಅನುಭವದ ವ್ಯಾಪ್ತಿ ದೊಡ್ಡದಾಗಲು ಕಾರಣವಾಯಿತು. ಶಾಲಾ ಶಿಕ್ಷಕರಾಗಿ ವೃತ್ತಿಜೀವನವನ್ನು ಆರಂಭಿಸಿ, ನಂತರದ ದಿನಗಳಲ್ಲಿ ಪತ್ರಿಕೋದ್ಯಮ ಆಯ್ದುಕೊಂಡರು; ಬಂಗಾಳದ ಪ್ರಸಿದ್ಧ ದಿನಪತ್ರಿಕೆ 'ಆನಂದಬಾಝಾರ್ ಪತ್ರಿಕಾ'ದಲ್ಲಿ ಕಾರ್ಯ ನಿರ್ವಹಿಸಿದರು.

ಸಣ್ಣಕಥೆ, ಕಾದಂಬರಿ, ಮಕ್ಕಳ ಕಥೆ, ಮಕ್ಕಳ ಕಾದಂಬರಿ, ಸಂಪಾದನೆ – ಹೀಗೆ ಸಾಹಿತ್ಯದ ಬಹುತೇಕ ಎಲ್ಲ ಪ್ರಕಾರಗಳಲ್ಲಿಯೂ ಇವರು ಕೃಷಿ ಮಾಡಿದ್ದಾರೆ. ಇವರು ಬರೆದ ಐವತ್ತಕ್ಕೂ ಹೆಚ್ಚು ಮಕ್ಕಳ ಕೃತಿಗಳು, ಸುಮಾರು ಮೂವತ್ತು ಕಾದಂಬರಿಗಳು, ಹತ್ತಕ್ಕೂ ಅಧಿಕ ಕಥಾಸಂಕಲನಗಳು, ತರುಣರಿಗಾಗಿ ಬರೆದ ಇಪ್ಪತ್ತಕ್ಕೂ ಹೆಚ್ಚು ಕೃತಿಗಳು ಪ್ರಕಟವಾಗಿವೆ. ಇಪ್ಪತ್ತಕ್ಕೂ ಹೆಚ್ಚು ಕಾದಂಬರಿಗಳು ಬಂಗಾಳಿಯಲ್ಲಿ ಚಲನಚಿತ್ರಗಳಾಗಿಯೂ ಜನಪ್ರಿಯತೆಯನ್ನು ಪಡೆದಿವೆ. 'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ' (1989, 'ಮಾನವಜಮಿನ್' ಕಾದಂಬರಿಗಾಗಿ), 'ಕೇಂದ್ರ ಸಾಹಿತ್ಯ ಅಕಾಡೆಮಿ ಫೆಲೋಶಿಪ್' (2021) ಸೇರಿದಂತೆ ಹಲವು ಪ್ರಶಸ್ತಿ ಪುರಸ್ಕಾರಗಳಿಗೆ ಪಾತ್ರರಾಗಿರುವ ಶೀರ್ಷೇಂದು 2023ರ 'ಕುವೆಂಪು ರಾಷ್ಟ್ರೀಯ ಪುರಸ್ಕಾರ'ಕ್ಕೆ ಭಾಜನರು. ಭಾರತದ ಶ್ರೇಷ್ಠ ಲೇಖಕರಲ್ಲೊಬ್ಬರಾದ ಶೀರ್ಷೇಂದು ಮುಖೋಪಾಧ್ಯಾಯ ಅವರೊಡನೆ ನಡೆಸಿದ ಸಂದರ್ಶನದ ಆಯ್ದ ಭಾಗಗಳು ಇಲ್ಲಿವೆ.